# ಕರ್ನಾಟಕ ಗೃಹ ಮಂಡಳಿ

## ಬೆಂಗಳೂರು ಕಂದಾಯ ವಿಭಾಗದ ಬೆಂಗಳೂರು, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಬಡಾವಣೆಗಳಲ್ಲಿ ಲಭ್ಯವಿರುವ ನಾಗರಿಕ ಸೌಲಭ್ಯ ನಿವೇಶನಗಳ (ಸಿ.ಎ. ಸೈಟುಗಳು) ಹಂಚಿಕೆಗೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಯು ಬೆಂಗಳೂರಿನ ಸೂರ್ಯನಗರ 2 & 3ನೇ ಹಂತ, ಹುಸ್ಕೂರು, ಹಂಪಾಪುರ, ದಾವಣಗೆರೆ ಜಿಲ್ಲೆಯ ಕುಂದುವಾಡ, ಹರಪನಹಳ್ಳಿ, ಹರಿಹರ-ಅಮರಾವತಿ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಹೊಸದುರ್ಗ, ಕುದಾಪುರ-ನಾಯಕನಹಟ್ಟಿ ಬಡಾವಣೆಗಳಲ್ಲಿ ಲಭ್ಯವಿರುವ ಈ ಕೆಳಕಂಡ ನಾಗರಿಕ ಸೌಲಭ್ಯದ (ಸಿ.ಎ) ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ರೆಗ್ಯುಲೇಶನ್ಸ್ 2014 ಮತ್ತು ಕರ್ನಾಟಕ ಗೃಹ ಮಂಡಳಿ ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ (ತಿದ್ದುಪಡಿ) ರೆಗ್ಯುಲೇಶನ್ಸ್ 2019 ಅನುಸಾರ ಹಂಚಿಕೆ ಮಾಡಲು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20-03-2020**

| ಸಿ.ಎ. ನಿವೇಶನ ಸಂಖ್ಯೆ | ಅಂದಾಜು ವಿಸ್ತೀರ್ಣ (ಚ.ಮೀ.ಗಳಲ್ಲಿ) | ಮಂಡಳಿ ದರ (ಚ.ಮೀ.ಗೆ ರೂ.ಗಳಲ್ಲಿ) | ಉದ್ದೇಶ |
|---|---|---|---|
| **ಸೂರ್ಯನಗರ 2ನೇ ಹಂತ, ಬೆಂಗಳೂರು** | | | |
| ಸಿ.ಎ-382/ಎ | 218.00 | 7125/- | ಅಂಚೆ ಇಲಾಖೆ |
| ಸಿ.ಎ-930/ಎ | 1843.00 | 7125/- | ಹಿರಿಯ ಪ್ರಾಥಮಿಕ ಶಾಲೆ |
| ಸಿ.ಎ-1857/ಎ | 1777.00 | 7125/- | ಆಸ್ಪತ್ರೆ |
| ಸಿ.ಎ-2778/ಎ | 1815.00 | 7125/- | ಬಿ.ಎಂ.ಟಿ.ಸಿ. ಬಸ್ ನಿಲ್ದಾಣ |
| ಸಿ.ಎ-2944/ಎ | 3100.00 | 7125/- | ಪ್ರೌಢಶಾಲೆ |
| ಸಿ.ಎ-2958/ಎ | 882.00 | 7125/- | ಸರ್ಕಾರಿ ಶಾಲೆ |
| ಸಿ.ಎ-3026/ಎ | 770.00 | 7125/- | ಶಾಲೆ (ಎಸ್.ಸಿ) |
| ಸಿ.ಎ-3124/ಎ | 432.00 | 7125/- | ಆರೋಗ್ಯ ಕೇಂದ್ರ (ಎಸ್.ಸಿ) |
| ಸಿ.ಎ-1481/ಬಿ | 6170.00 | 7125/- | ಕಾಲೇಜು |
| ಸಿ.ಎ-1826/ಬಿ | 2120.00 | 7125/- | ಸರ್ಕಾರಿ ಆರೋಗ್ಯ ಕೇಂದ್ರ |
| ಸಿ.ಎ-810/ಸಿ | 1496.00 | 5500/- | ನರ್ಸರಿ ಶಾಲೆ (ಎಸ್.ಸಿ) |
| ಸಿ.ಎ-1677/ಸಿ | 4681.80 | 8250/- | ಆಸ್ಪತ್ರೆ |
| ಸಿ.ಎ-1734/ಸಿ | 3243.00 | 5500/- | ಪ್ರೌಢ ಶಾಲೆ |
| ಸಿ.ಎ-2020/ಸಿ | 1156.00 | 5500/- | ಆರೋಗ್ಯ ಕೇಂದ್ರ |
| ಸಿ.ಎ-841/ಡಿ | 2440.00 | 5500/- | ಶಾಲೆ |
| ಸಿ.ಎ-1242/ಡಿ | 1465.00 | 5500/- | ಆರೋಗ್ಯ ಕೇಂದ್ರ (ಎಸ್.ಟಿ) |
| **ಸೂರ್ಯನಗರ 3ನೇ ಹಂತ** | | | |
| ಸಿ.ಎ-2/ಬಿ1 | 5454.00 | 8500/- | ಶಾಲೆ |
| ಸಿ.ಎ-10/ಬಿ8 | 6786.00 | 8500/- | ಸಮುದಾಯ ಭವನ |
| **ಹುಸ್ಕೂರು, ಹೊಸಕೋಟೆ ರಸ್ತೆ, ಬೆಂಗಳೂರು** | | | |
| ಸಿ.ಎ-1 | 5117.50 | 12100/- | ಶಾಲೆ |
| **ಹಂಪಾಪುರ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.** | | | |
| ಸಿ.ಎ-2 | 826.84 | 6650/- | ಸಾರ್ವಜನಿಕ |
| ಸಿ.ಎ-5 | 1773.06 | 6650/- | ಸಾರ್ವಜನಿಕ |
| ಸಿ.ಎ-6 | 4482.54 | 6650/- | ಸಾರ್ವಜನಿಕ (ಎಸ್.ಸಿ) |
| ಸಿ.ಎ-7 | 4554.12 | 6650/- | ಸಾರ್ವಜನಿಕ |

| | | | |
|---|---|---|---|
| ಸಿ.ಎ–8 | 5686.14 | 6650/– | ಸಾರ್ವಜನಿಕ |
| ಕುಂದುವಾಡ–ದಾವಣಗೆರೆ | | | |
| ಸಿ.ಎ–1 | 3382.30 | 2750/– | ಸಮುದಾಯ ಭವನ (ಎಸ್.ಸಿ) |
| ಸಿ.ಎ–3 | 12959.24 | 2750/– | ಪ್ರಾಥಮಿಕ ಶಾಲೆ |
| ಸಿ.ಎ–7 | 1602.93 | 2750/– | ವ್ಯಾಯಾಮ ಶಾಲೆ |
| ಸಿ.ಎ–8 | 5584.05 | 2750/– | ಆರೋಗ್ಯ ಕೇಂದ್ರ |
| ಸಿ.ಎ–9 | 3045.14 | 2750/– | ಶಿಶು ಪಾಲನಾ ಕೇಂದ್ರ (ಎಸ್.ಸಿ) |
| ಸಿ.ಎ–14 | 1000.03 | 2750/– | ನರ್ಸರಿ ಶಾಲೆ |
| ಸಿ.ಎ–15 | 2738.85 | 2750/– | ಮನರಂಜನಾ ಕೇಂದ್ರ |
| ಸಿ.ಎ–18 | 16719.17 | 2750/– | ಪ್ರೌಢಶಾಲೆ |
| ಸಿ.ಎ–19 | 3692.97 | 2750/– | ಸಾಂಸ್ಕೃತಿಕ ಕೇಂದ್ರ |
| ಸಿ.ಎ–20 | 732.32 | 2750/– | ನರ್ಸರಿ ಶಾಲೆ |
| ಸಿ.ಎ–22 | 320.31 | 2750/– | ಆರೋಗ್ಯ ಕೇಂದ್ರ |
| ಸಿ.ಎ–24 | 734.73 | 2750/– | ನರ್ಸರಿ ಶಾಲೆ |
| **ಹರಪನಹಳ್ಳಿ, ದಾವಣಗೆರೆ ಜಿಲ್ಲೆ** | | | |
| ಸಿ.ಎ–1 | 1995.00 | 750/– | ಸಮುದಾಯ ಭವನ |
| ಸಿ.ಎ–2 | 682.00 | 750/– | ಡಿಸ್ಪೆನ್ಸರಿ |
| ಸಿ.ಎ–3 | 2126.00 | 750/– | ಪ್ರಾಥಮಿಕ ಆರೋಗ್ಯ ಕೇಂದ್ರ |
| ಸಿ.ಎ–4 | 3902.00 | 750/– | ಶಾಲೆ (ಎಸ್.ಸಿ) |
| ಹರಿಹರ–ಅಮರಾವತಿ, ದಾವಣಗೆರೆ ಜಿಲ್ಲೆ | | | |
| ಸಿ.ಎ–1/ಎ | 1960.00 | 1950/– | ಸಾಮಾಜಿಕ ಕೇಂದ್ರ |
| ಸಿ.ಎ–4 | 472.50 | 1950/– | ಡಿಸ್ಪೆನ್ಸರಿ (ಎಸ್.ಸಿ) |
| **ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.** | | | |
| ಸಿ.ಎ–1 | 910.00 | 2100/– | ಶಾಲೆ |
| **ಹೊಸದುರ್ಗ, ಚಿತ್ರದುರ್ಗ ಜಿಲ್ಲೆ** | | | |
| ಸಿ.ಎ–2 | 1205.55 | 3500/– | ಶಾಲೆ |
| **ಕುದಾಪುರ ನಾಯಕನಹಟ್ಟಿ, ಚಿತ್ರದುರ್ಗ ಜಿಲ್ಲೆ.** | | | |
| ಸಿ.ಎ–1 | 3072.21 | 750/– | ಆರೋಗ್ಯ ಕೇಂದ್ರ |
| ಸಿ.ಎ–2 | 4657.11 | 750/– | ಕಾಲೇಜು |
| ಸಿ.ಎ–3 | 4254.43 | 750/– | ಶಾಲೆ (ಎಸ್.ಸಿ) |
| ಸಿ.ಎ–4 | 3620.07 | 750/– | ಸಮುದಾಯ ಭವನ (ಎಸ್.ಟಿ) |
| ಸಿ.ಎ–5 | 1742.46 | 750/– | ಸರ್ಕಾರಿ ಕಛೇರಿ |

1) ಸೂರ್ಯನಗರ 2ನೇ ಹಂತ – ಕಛೇರಿ ದೂರವಾಣಿ ಸಂಖ್ಯೆ 080–27804400, ಮೊಬೈಲ್ ನಂ. 9886647084
2) ಸೂರ್ಯನಗರ 3ನೇ ಹಂತದ ಕಛೇರಿ, ಮೊಬೈಲ್ ನಂ. 9448373762/9902273111
3) ದಾವಣಗೆರೆ ಜಿಲ್ಲಾ ಯೋಜನಾ ಕಛೇರಿ, ಮೊಬೈಲ್ ನಂ. 9448214736
4) ಚಿತ್ರದುರ್ಗ ಜಿಲ್ಲಾ ಯೋಜನಾ ಕಛೇರಿ, ಮೊಬೈಲ್ ನಂ.9448470311

ಸಿ.ಎ. ನಿವೇಶನಗಳ ಸಂಖ್ಯೆ, ವಿಸ್ತೀರ್ಣ, ಉದ್ದೇಶ ಇತ್ಯಾದಿ ವಿವರಗಳನ್ನು ಮಂಡಳಿಯ ವೆಬ್‌ಸೈಟ್ www.karnatakahousing.com ಗೆ ಲಾಗಿನ್ ಮಾಡಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾಸೇ) ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307/309/335/347 ರಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ದಿನಾಂಕ: 20–03–2020

Sd/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು

ಷರತ್ತುಗಳು:-

1) ಸಿ.ಎ. ನಿವೇಶನದ ನಿಗಧಿತ ನಮೂನೆಯ ಅರ್ಜಿಯನ್ನು www.karnatakahousing.com ಅಥವಾ www.khbcustomerinfo.com ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು.

2) ಕರ್ನಾಟಕ ಸಹಕಾರಿ ಸಂಘ ಸಂಸ್ಥೆಗಳ ನೋಂದಣಿ 1960 (ಕರ್ನಾಟಕ ಕಾಯ್ದೆ 17/1960) ಅಥವಾ ಸಹಕಾರಿ ಸಂಘ ಸಂಸ್ಥೆ ಕಾಯ್ದೆ 1959ರ ಪ್ರಕಾರ ನೋಂದಣಿ ಪಡೆದಿರುವ ಶೈಕ್ಷಣಿಕ ಸಂಸ್ಥೆಗಳು ಮತ್ತು ಸಂಘಗಳಿಗೆ ಸಿ.ಎ. ನಿವೇಶನಗಳನ್ನು ಹಂಚಿಕೆಗಾಗಿ ಪರಿಗಣಿಸಲಾಗುವುದು, ಅಥವಾ ಶೈಕ್ಷಣಿಕ ಉದ್ದೇಶಕ್ಕಾಗಿಯೇ ರಚಿಸಿರುವ ಪವಿತ್ರ ಧರ್ಮ ಸಂಸ್ಥೆಗಳಿಗೆ ಮಾತ್ರ ಹಂಚಿಕೆ ಮಾಡಲಾಗುವುದು. ಸಂಸ್ಥೆಗಳು ನೋಂದಣಿಯಾಗಿರಬೇಕು.

3) ಹಂಚಿಕೆಯು 30 ವರ್ಷಗಳ ಅವಧಿಗೆ ಗುತ್ತಿಗೆ ಕರಾರಿನ ಮೇಲೆ ನೀಡಲಾಗುವುದು.

4) ಸಿ.ಎ. ನಿವೇಶನದ 2014ರ ಮಾರ್ಗಸೂಚಿಯಂತೆ ಸಿ.ಎ. ನಿವೇಶನದ ಹಂಚಿಕೆಗಾಗಿ ಅರ್ಜಿ ಜೊತೆಯಲ್ಲಿ ಈ ಕೆಳಕಂಡಂತೆ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿಯನ್ನು ಪಾವತಿಸುವುದು. ಈ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ. ದಸ್ತಾವೇಜು ಶುಲ್ಕವೆಂಬುದಾಗಿ ಪರಿಗಣಿಸಲಾಗುವುದು. ಈ ಷರತ್ತಿಗೆ ಒಪ್ಪಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. (ಅ) ನಾಗರಿಕ ಸೌಲಭ್ಯ ಒದಗಿಸುವ ಸಾಮರ್ಥ್ಯವಲ್ಲದ ಶಿಕ್ಷಣ ಸಂಸ್ಥೆಗಳು ಸಲ್ಲಿಸುವ ಪ್ರಸ್ತಾವನೆಗಳನ್ವಯ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲಾಗುವುದಿಲ್ಲ.

| ಪ್ರದೇಶ ಚದರ ಮೀಟರುಗಳಲ್ಲಿ | ನೋಂದಣಿ ಶುಲ್ಕ ರೂ. ಗಳಲ್ಲಿ | ಆರಂಭಿಕ ಠೇವಣಿ ರೂ. ಗಳಲ್ಲಿ |
|---|---|---|
| 1000 ಕ್ಕಿಂತ ಕಡಿಮೆ | 2500/- | 25,000/- |
| 1000 ಮತ್ತು ಅದಕ್ಕಿಂತ ಹೆಚ್ಚು ಆದರೆ 2000 ಕ್ಕಿಂತ ಕಡಿಮೆ | 5000/- | 50,000/- |
| 2000 ಮತ್ತು ಅದಕ್ಕಿಂತ ಹೆಚ್ಚು ಆದರೆ 4000 ಕ್ಕಿಂತ ಕಡಿಮೆ | 7500/- | 75,000/- |
| 4000 ಮತ್ತು ಅದಕ್ಕಿಂತ ಹೆಚ್ಚು | 10000/- | 1,00,000/- |

5) ಮಂಡಳಿಯು ಪ್ರತಿಯೊಂದು ಸಂಘ ಸಂಸ್ಥೆಗಳನ್ನು ಪರಿಶೀಲಿಸಿ, ವಿಶೇಷ ಗಮನದೊಂದಿಗೆ ಕೆಳಗಿನ ನಿಯಮಗಳಿಗನುಗುಣವಾಗಿ ಹಂಚಿಕೆ ಆಯ್ಕೆ ಮಾಡಲಾಗುವುದು. ಆದುದರಿಂದ ಈ ಕೆಳಕಂಡ ಮಾಹಿತಿಗಳನ್ನು ತಪ್ಪದೇ ಸಲ್ಲಿಸುವುದು. (ಅ) ಸಂಘ/ಸಂಸ್ಥೆಯು ಸ್ಥಾಪನೆಯಾದ ದಿನದಿಂದ ಸಾರ್ವಜನಿಕ ಕಾರ್ಯಗಳಲ್ಲಿ ಸಲ್ಲಿಸಿದ ಸೇವೆ ಮತ್ತು ಇದರ ಉದ್ದೇಶಗಳು ಹಾಗೂ ಕಾರ್ಯಚಟುವಟಿಕೆಗಳು, (ಆ) ಸಂಘ/ಸಂಸ್ಥೆಯ ಆರ್ಥಿಕ ಸ್ಥಿತಿಗತಿ ಕುರಿತು ಆಡಿಟ್ ವರದಿ. (ಇ) ಸಂಸ್ಥೆಯು ಪ್ರಸ್ತುತ ಇರುವ ಸ್ಥಳ / ಬಡಾವಣೆ / ತಾಲ್ಲೂಕು / ಜಿಲ್ಲೆ/ ದೂರವಾಣಿ ಸಂಖ್ಯೆ (ಈ) ಸಿ.ಎ. ನಿವೇಶನ ಹಂಚಿಕೆಯಾದಲ್ಲಿ, ಸ್ಥಳೀಯ ಸಾಮಾನ್ಯ ನಾಗರಿಕರಿಗೆ ಪ್ರಾಪ್ತವಾಗುವ ಸೌಲಭ್ಯಗಳ ವಿವರ (ಉ) ಸಂಘ ಸಂಸ್ಥೆಗಳ ವಾರ್ಷಿಕ ವರದಿಗಳು ಹಾಗೂ ತನಿಖಾ ವರದಿಗಳ ಪ್ರಕಾರವಾಗಿ ಸದ್ಭಾವನೆ, ಸ್ವರೂಪ ಮತ್ತು ಲಕ್ಷಣಗಳು, (ಊ) ಸಂಘ ಸಂಸ್ಥೆಗಳು ಸಿ.ಎ. ನಿವೇಶನಗಳನ್ನು ಪಡೆಯುವ ಅಗತ್ಯತೆಯು ಯಾವ ರೀತಿ ನಾಗರಿಕ ಸೌಲಭ್ಯ ನೀಡಿ ಉಪಯೋಗ ಮಾಡುವ ಬಗ್ಗೆ ವಿವರಗಳೊಂದಿಗೆ ಸಂಬಂಧಿಸಿದ ಕಟ್ಟಡಗಳು ಅಥವಾ ಇತರೆ ನಿರ್ಮಾಣಗಳ ಬಗ್ಗೆ ಪೂರ್ಣ ವಿವರ.

6) ಸಿ.ಎ. ನಿವೇಶನ ಹಂಚಿಕೆಯಾದ 03 ವರ್ಷದ ಒಳಗೆ ಯಾವ ಉದ್ದೇಶಕ್ಕಾಗಿ ಪಡೆದಿದೆಯೋ, ಆ ಉದ್ದೇಶದಂತೆ ಕಟ್ಟಡ ನಿರ್ಮಾಣ ಮಾಡಿ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಬೇಕಾಗಿದೆ. ತಪ್ಪಿದ್ದಲ್ಲಿ ಸದರಿ ಸ್ವತ್ತನ್ನು ಮಂಡಳಿಯ ಸ್ವತ್ತಾಗಿ ಪರಿಗಣಿಸಲಾಗುವುದಲ್ಲದೆ, ಹಂಚಿಕೆಯು ತನ್ನಿಂದ ತಾನೆ ರದ್ದಾಗುವುದು.

7) ಸಿ.ಎ. ನಿವೇಶನಗಳ ದರವು ಆಯಾ ಬಡಾವಣೆಗಳಲ್ಲಿ ಪ್ರಚಲಿತ ಆರ್ಥಿಕ ವರ್ಷದಲ್ಲಿ ವಸತಿ ನಿವೇಶನ ಹಂಚಿಕೆಗಾಗಿ ನಿಗಧಿಪಡಿಸಿದ ದರದ ಎಸ್.ಸಿ/ಎಸ್.ಟಿ. ಪ್ರವರ್ಗ ಹಾಗೂ ವಿಕಲಚೇತನರು ನಡೆಸುವ ಸಂಸ್ಥೆಗಳಿಗೆ ಶೇ.50 ರಷ್ಟು ಹಾಗೂ ಇತರೆ ಪ್ರವರ್ಗಗಳಿಗೆ ಶೇ.75 ರಷ್ಟು ದರ ನಿಗಧಿಪಡಿಸಲಾಗುತ್ತದೆ.

8) ಮಂಡಳಿಯು ನಿಗಧಿಪಡಿಸಿರುವ ಸಿ.ಎ. ನಿವೇಶನದ ಬೆಲೆಯ ಒಟ್ಟು ಮೊತ್ತವನ್ನು ಹಂಚಿಕೆಯಾದ 120 ದಿನಗಳೊಳಗೆ ಪಾವತಿ ಮಾಡಬೇಕಾಗಿರುತ್ತದೆ. ತಪ್ಪಿದ್ದಲ್ಲಿ, ಈ ಮೊತ್ತಕ್ಕೆ ಅನ್ವಯವಾಗುವ ದರದಂತೆ ಬಡ್ಡಿಯನ್ನು ವಿಧಿಸಲಾಗುವುದು.

9) ಸಿ.ಎ. ನಿವೇಶನಗಳ ವಿತರಣೆಯ ಸಂಪೂರ್ಣ ಹಕ್ಕನ್ನು (ಒಪ್ಪುವ ಅಥವಾ ತಿರಸ್ಕರಿಸುವ) ಕರ್ನಾಟಕ ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿದೆ,

10) ಕೆಲವು ಪ್ರಕರಣಗಳಲ್ಲಿ ಗೃಹ ಆಯುಕ್ತರು ಅಗತ್ಯ/ಸೂಕ್ತ ಷರತ್ತುಗಳನ್ನು ವಿಧಿಸಬಹುದಾಗಿರುತ್ತದೆ.

11) ಹಾಲಿ ಪ್ರಕಟಣೆಯಂತೆ ಮಂಜೂರಾತಿ ನೀಡುವಾಗ ಹೊಸದಾಗಿ ಮಂಡಳಿಯಿಂದ ಜಾರಿಯಾಗುವ ನಿಯಮಗಳನ್ನು ಅನುಸರಿಸಬೇಕಾಗಿರುತ್ತದೆ. ಆ ನಿಯಮದಂತೆ ಕ್ರಮ ವಹಿಸಲಾಗುವುದು.

12) ಸಿ.ಎ. ನಿವೇಶನಗಳನ್ನು ತುರ್ತಾಗಿ ವಿಲೇವಾರಿ ಮಾಡಲು ಒಂದು ಉದ್ದೇಶದಿಂದ ಮತ್ತೊಂದು ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಯಾವುದೇ ಸೂಚನೆ ಹಾಗೂ ಬದಲಾವಣೆ ಮಾಡಲು ಗೃಹ ಆಯುಕ್ತರು ಅಧಿಕೃತ ಪ್ರಾಧಿಕಾರಿಯಾಗಿರುತ್ತಾರೆ.

13) ಯಾವ ನಿವೇಶನಕ್ಕೆ ಅರ್ಜಿಯನ್ನು ಸಲ್ಲಿಸಲಾಗಿದೆ ಎಂಬುದನ್ನು ನಿಖರವಾಗಿ ಸಿ.ಎ. ನಿವೇಶನದ ಸಂಖ್ಯೆಯನ್ನು ಬರೆದು ಸಲ್ಲಿಸಬೇಕು ಹಾಗೂ ಈಗಾಗಲೇ ಒಂದು ವೇಳೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ. ಹೊಸದಾಗಿ ಪ್ರಕಟಣೆಯ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸಿ ಅರ್ಜಿಯನ್ನು ಮೇಲ್ಕಂಡ ಮಾಹಿತಿಗಳೊಂದಿಗೆ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿಯನ್ನು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ಪಡೆದು ಅಂಶ 4 ರಂತೆ ಡಿ.ಡಿ.ಯೊಂದಿಗೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–09 ಇಲ್ಲಿ ಸಲ್ಲಿಸತಕ್ಕದ್ದು.

14) ಮೇಲೆ ತಿಳಿಸಿರುವ ಸಿ.ಎ. ನಿವೇಶನಗಳ ವಿಸ್ತೀರ್ಣದಲ್ಲಿ ಹೆಚ್ಚು ಕಡಿಮೆಯಾಗುವ ಸಾಧ್ಯತೆಗಳಿರುತ್ತವೆ. ಸ್ವಾಧೀನಕ್ಕೆ ನೀಡುವ ಮುನ್ನ ನಿಖರವಾಗಿ ಅಳತೆ ಮಾಡಿ ನೀಡಲಾಗುವುದು.

15) ಅರ್ಜಿಯನ್ನು ಸಂಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಲು ಕಡೆಯ ದಿನಾಂಕ 30-03-2020. ಇದು ಸಾರ್ವಜನಿಕ ಪ್ರಕಟಣೆಯಾಗಿದ್ದು, ಹಂಚಿಕೆಯಾಗದೆ ಉಳಿಯುವ ಸಿ.ಎ. ನಿವೇಶನಗಳನ್ನು ಇನ್ನು ಮುಂದೆ ಪುನಃ ಸಾರ್ವಜನಿಕ ಪ್ರಕಟಣೆ ನೀಡದೆ, ಹಂಚಿಕೆ ಮಾಡಲಾಗುವುದು. ಅಪೂರ್ಣ ಅರ್ಜಿಗಳಿಗೆ ಪತ್ರ ವ್ಯವಹಾರಕ್ಕೆ ಅವಕಾಶ ನೀಡದೆ ತಿರಸ್ಕರಿಸಲಾಗುವುದು.

16) ಮೇಲಿನ ಷರತ್ತುಗಳ ಪ್ರಕಾರ ಇಚ್ಛೆಯುಳ್ಳ ಸಂಘ ಸಂಸ್ಥೆಗಳು ಮಾತ್ರ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

17) ಈ ಹಿಂದೆ ಮಂಡಳಿಯಿಂದ ಆಯಾ ಜಿಲ್ಲೆಯ ಸಿ.ಎ. ನಿವೇಶನಗಳಿಗೆ ಸಂಬಂಧಪಟ್ಟಂತೆ, ಸಾರ್ವಜನಿಕ ಪ್ರಕಟಣೆ ನೀಡಿ, ಮಂಡಳಿಗೆ ನಿಗದಿತ ಸಿ.ಎ. ನಿವೇಶನಕ್ಕೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಈ ಪ್ರಕಟಣೆಯಲ್ಲಿ ಆ ಸಿ.ಎ. ನಿವೇಶನಗಳು ಪ್ರಕಟಣೆಯಾಗಿದ್ದ ಪಕ್ಷದಲ್ಲಿ, ಹಿಂದೆ ಸಲ್ಲಿಸಿದ್ದ ಅರ್ಜಿಯ ಜೊತೆಯಲ್ಲಿ ಆರಂಭಿಕ ಠೇವಣಿ ಇವುಗಳನ್ನು ಪಾವತಿಸಿದಲ್ಲಿ ಅದರ ನಕಲು ಪ್ರತಿಗಳನ್ನು ಲಗತ್ತಿಸಿ ಪುನಃ ಅರ್ಜಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಸಂಪರ್ಕಿಸಬಹುದಾಗಿರುತ್ತದೆ. ಅಥವಾ ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾಸೇ) ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307/309/335/347 ರಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ದಿನಾಂಕ: 20–03–2020

Sd/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

**ನಮೂನೆ-1**

**(ವಿನಿಮಯ 5ರ ಉಪನಿಯಮ (3)ನ್ನು ನೋಡಿ)**

**ಕರ್ನಾಟಕ ಗೃಹ ಮಂಡಳಿ ( ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2014ರಡಿಯಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆಗಾಗಿ ಅರ್ಜಿ ನಮೂನೆ.**

ಬಡಾವಣೆಯ ಹೆಸರು:

ನಾಗರೀಕ ಸೌಲಭ್ಯದ ವರ್ಗ

| | | |
|---|---|---|
| 1(ಎ) | ಅರ್ಜಿದಾರರ ಹೆಸರು (ಸಂಸ್ಥೆ, ಸಂಘ, ಟ್ರಸ್ಟ್ ಅಥವಾ ಸೊಸೈಟಿ) (ದಪ್ಪ ಅಕ್ಷರಗಳಲ್ಲಿ) | |
| (ಬಿ) | ಸಂಸ್ಥೆಯ ಪದಾಧಿಕಾರಿಗಳ ಹೆಸರು | |
| (ಸಿ) | ಸಂಸ್ಥೆಯ ಯಾವುದೇ ಕಾನೂನಡಿಯಲ್ಲಿ ನೋಂದಾಯಿತಗೊಂಡಿದ್ದರೆ, ಅಂತಹ ನೋಂದಣಿಯ ಸಂಖ್ಯೆ ಮತ್ತು ದಿನಾಂಕ (ನೋಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಿ) | |
| 2 | ಹಂಚಿಕೆಯನ್ನು ಕೋರಲು ನಿರ್ಣಯವನ್ನು ತೆಗೆದುಕೊಂಡ ದಿನಾಂಕ (ಪ್ರತಿಯನ್ನು ಲಗತ್ತಿಸಬಹುದು) | |
| 3 | ಅರ್ಜಿದಾರರ ವಿಳಾಸ | |
| 4 | ನೋಂದಣಿ ಶುಲ್ಕ ಮೊತ್ತ:<br>ಡಿ.ಡಿ.ಸಂಖ್ಯೆ :<br>ದಿನಾಂಕ: | |
| 5 | ಆರಂಭಿಕ ಠೇವಣಿ ಮೊತ್ತ:<br>ಡಿ.ಡಿ. ಮೊತ್ತ:<br>ದಿನಾಂಕ: | |
| 6 | ಕೋರಿದ ನಿವೇಶನಗಳ ಸಂಖ್ಯೆ | |
| 7 | ಕರ್ನಾಟಕ ಗೃಹ ಮಂಡಳಿ ನಾಗರಿಕ ಸೌಲಭ್ಯ ನಿವೇಶನ ಕೋರಿ, ನೀವು ಈಗಾಗಲೇ ಎಷ್ಟು ಬಾರಿ ಅರ್ಜಿ ಸಲ್ಲಿಸಿದ್ದೀರಿ?<br>ದಿನಾಂಕದೊಂದಿಗೆ ಅರ್ಜಿಯ ಮತ್ತು ಠೇವಣಿ ಮಾಡಿದ ಪ್ರಾರಂಭಿಕ ಮೊತ್ತದ ವಿವರಗಳನ್ನು ನೀಡಿ. | |
| 8 | ನಿವೇಶನವನ್ನು ನೀಡಲಾದ ನಾಗರೀಕ ಸೌಲಭ್ಯದ ರೀತಿಯನ್ನು ಒದಗಿಸಲು ಸಂಸ್ಥೆಯ ಸಾಮರ್ಥ್ಯದ ವಿವರ | |
| 9 | ನಿಮ್ಮ ಸಂಸ್ಥೆಯನ್ನು ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡದವರ ಪ್ರಯೋಜನಕ್ಕಾಗಿಯೇ ಅನನ್ಯವಾಗಿ ಸ್ಥಾಪಿಸಲಾಗಿದೆಯೇ ಮತ್ತು ಸದಸ್ಯರಲ್ಲಿ ಬಹುಪಾಲು ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳಿಗೆ ಸೇರಿದವರೇ/ | |

| | | |
|---|---|---|
| 10 | ಸಂಸ್ಥೆಯ ಗುರಿಗಳು ಮತ್ತು ಚಟುವಟಿಕೆಗಳು ಮತ್ತು ಸ್ಥಾಪನೆಯಾದಾಗಿನಿಂದ ಸಂಸ್ಥೆ ಮಾಡಿದ ಸಾರ್ವಜನಿಕ ಸೇವೆ (ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಯ ಪ್ರತಿ, ಯಾವುದಾದರು ಇದ್ದರೆ, ಲಗತ್ತಿಸಬಹುದು) | |
| 11 | ಆರ್ಥಿಕ ಸ್ಥಿತಿ ಗತಿ (ಕಳೆದ ಮೂರು ವರ್ಷದ ಲೆಕ್ಕ ಪರಿಶೋಧನೆಯಾದ ವಾರ್ಷಿಕ ಜಮಾ ಖರ್ಚು ಪಟ್ಟಿಯನ್ನು ಲಗತ್ತಿಸುವುದು) | |
| 12 | ಸಂಸ್ಥೆಯ ಹಾಲಿ ಇರುವ ಸ್ಥಳ | |

ನಾನು ಮೇಲೆ ನೀಡಲಾದ ಮಾಹಿತಿಯು, ನನ್ನ ಅರಿವಿಗೆ ಬಂದಂತೆ ಸತ್ಯವೆಂದೂ, ಯಾವ ವಿಷಯವನ್ನು ಮುಚ್ಚಿಟ್ಟಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ. ಮೇಲೆ ನೀಡಲಾದ ಯಾವುದೇ ಮಾಹಿತಿಯು ತಪ್ಪು ಅಥವಾ ಸುಳ್ಳು ಎಂದು ಕಂಡುಬಂದರೆ, ಹಂಚಿಕೆಗಾಗಿ ನನ್ನ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು ಪಾವತಿಸಿದ ಮೊತ್ತವನ್ನು ಕರ್ನಾಟಕ ಗೃಹ ಮಂಡಳಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

ದಿನಾಂಕಃ

ಸ್ಥಳಃ

ಅರ್ಜಿದಾರನ ಸಹಿ